‘ಯಾಕೆ? ಡಿಸ್ಟರ್ಬ್ ಆಯ್ತು?’ ಅವಳು ಕೇಳಿದಳು.

‘ಇಲ್ಲ. ನೀನು ಅವತ್ತು ಹಾಡ್ತಿದ್ದೆಯಲ್ಲಿ ಶ್ರೀಗಂಧ ನಾನಾಗೆ... ಅದನ್ನ ಹಾಡು. ಕೇಳಬೇಕು ಅನ್ನಿಸಿದೆ’ ಅಂದ.

ಯಾವ ಮಾತೂ ಆಡದೇ ತಂಬೂರಿ ಹಿಡಿದು ಹಾಡತೊಡಗಿದಳು. ಅವಳ ತನ್ಮಯತೆಯೋ, ಭಕ್ತಿಯೋ ಅಥವಾ ಅವನ ಭಾವವೇ ಹಾಗಿತ್ತೋ... ಏಕೋ ಏನೋ... ಅವನ ಕಣ್ಣಲ್ಲಿ ಕಂಡೂ ಕಾಣದಂತೆ ನೀರು. ಸುಮತಿ ತಂಬೂರಿ ಕೆಳಗಿಟ್ಟು ‘ಏನೋ ಚಿಂತೆ ಹಚ್ಚಿಕೊಂಡಿದ್ದೀರ. ಯಾಕೆ ಕೊರಗ್ತೀರ. ಎಲ್ಲ ಸರಿ ಆಗುತ್ತೆ. ಮನೇಲಿ ತಂಬೂರಿ ನುಡಿಸಿದರೆ, ಹಾಡು ಹೇಳಿದರೆ ಮನೆಗೆ ಒಳ್ಳೇದಾಗುತ್ತೆ ಅಂತ ನಮ್ಮ ಸಂಗೀತದ ಟೀಚರ್ ಹೇಳುತ್ತಿದ್ದರು. ಎಲ್ಲರಿಗೂ ಒಳ್ಳೇದಾಗಲಿ ಅಂತ ನಾನು ಈಗ ನಾಲ್ಕು ತಿಂಗಳಿಂದ ಈ ಹೊತ್ತಿನಲ್ಲಿ ಹಾಡ್ತ ಇರ್ತೀನಿ ಅಷ್ಟೆ. ನನ್ನಿಂದ ಇಷ್ಟಾದರೂ ಒಳ್ಳೇದಾಗಲಿ ಅಂತ ನನಗೆ ಆಸೆ.’ ಅವಳ ಧ್ವನಿ ಭಾರವಾಗಿತ್ತೋ, ಭಾವುಕವಾಗಿತ್ತೋ ಅವನಿಗೆ ತಿಳಿಯಲಿಲ್ಲ.

‘ಅವತ್ತು ಮಕ್ಕಳು ಮಾತಾಡಿದ್ರಲ್ಲ... ಸ್ಕೂಟರ್ ವಿಚಾರ ನನಗೆ ಅದನ್ನ ಕೇಳಿದ ಮೇಲೆ ತುಂಬಾ ಬೇಜಾರಾಗಿದೆ. ಯಾವುದರಲ್ಲೂ ಅಂತಹ ಆಸಕ್ತಿ ಇಲ್ಲ ಕಣೆ’ ನೇರವಾಗಿ ಹೇಳಿದ ಸುಂದರ್.

‘ಅದೇನು ಅಂತ ದೊಡ್ಡ ವಿಚಾರ ಅಲ್ಲ. ಅದನ್ಯಾಕೆ ತಲೆಗೆ ಹಚ್ಚಿಕೊಂಡಿದ್ದೀರ’ ಸುಮತಿ ಸಮಾಧಾನ ಮಾಡಲು ಯತ್ನಿಸಿದಳು.

**‘ಜೀವನ, ಸಂಬಂಧ, ಸಂಸಾರ... ಹೀಗೆ ಇದನ್ನೇ ತುಂಬಾ ದೊಡ್ಡ ವಿಚಾರ ಅಂತ ಯೋಚಿಸ್ತ ಕೂತುಕೊಳ್ಳೋದೇ ಅಥವಾ ಸುಖ, ಸಂತೋಷ, ಕರ್ತವ್ಯ ಅಂತ ಅದನ್ನ ಮಾಡ್ತ ಆನಂದ ಅನುಭವಿಸೋದೇ? ಆಯ್ಕೆ ನಮ್ಮದೇ ಅಲ್ವಾ? ಜೀವನ ಅಂದಮೇಲೆ ತಣ್ಣಗಿನ ಗಾಳಿಯೂ ಇರುತ್ತೆ, ಬಿರುಗಾಳಿಯೂ ಇರುತ್ತೆ...’ ಮೆದುವಾಗಿ ದೃಢವಾಗಿ ಹೇಳಿದಳು.**

‘ನನಗೆ ನಿನ್ನ ವಿಚಾರವೇ ಪ್ರಶ್ನೆ ಆಗಿಬಿಡುತ್ತಿದೆ. ಒಂದು ಗೃಹಪ್ರವೇಶಕ್ಕೆ ಹೋದರೆ ಬಾಗಿಲಿನ ಮರದಿಂದ ಹಿಡಿದು, ನೆಲಕ್ಕೆ ಹಾಸಿರುವ ಕಲ್ಲಿನವರೆಗೆ ನೂರು ಪ್ರಶ್ನೆ ಕೇಳಿ ವಿವರ ಪಡೀತೀಯ. ಮಕ್ಕಳ ವಿಚಾರದಲ್ಲಿ ನೀನು ನಿರ್ಲಿಪ್ತವಾದರೆ ನನಗೆ ಯಾಕೋ ಅದು ಸರಿಯಾಗಿ ಕಾಣುತ್ತಿಲ್ಲ. ನನಗೆ ನಿನ್ನನ್ನ ಅರ್ಥ ಮಾಡಿಕೊಳ್ಳೋದೇ ಕಷ್ಟ ಆಗಿಬಿಡುತ್ತಿದೆ. ಮಕ್ಕಳೂ ಹೀಗಾದರೆ ನಾವು ಯಾಕೆ ತಾನೇ ಬದುಕಿರಬೇಕು ಹೇಳು? ಹಿರಿಯರು ಅನ್ನೋ ಒಂದೇ ಒಂದು ಸೌಜನ್ಯ, ವಿನಯ ಏನೂ ಬೇಡವೇ ನಮ್ಮ ಮಕ್ಕಳಿಗೆ? ನಿನಗೆ ಈ ವಿಚಾರದಲ್ಲಿ ಸ್ವಲ್ಪ ಕೂಡ ಚಿಂತೆ ಇಲ್ಲ ಅಂದ್ರೆ ಏನು ಹೇಳಲಿ!’ ಸುಂದರ್ ನಿಟ್ಟುಸಿರುಬಿಟ್ಟ.

ಸುಮತಿ ನೇರವಾಗಿ ದೃಢವಾಗಿ ಆದರೆ ಮೃದುವಾಗಿ ಹೇಳಿದಳು, ‘ಚಿಂತೆ ಇಲ್ಲದಿದ್ರೆ ನಾವೆಲ್ಲಾ ಯಾಕೆ ಮನುಷ್ಯರಾಗಿ ಹುಟ್ಟಬೇಕು. ನೊಣವಾಗೋ, ನಾಲ್ಕು ಕಾಲಿನ ಪ್ರಾಣಿ ಆಗೋ ಹುಟ್ಟಬಹುದಿತ್ತು ಅಲ್ಲವೇ?’ ಅವನ ಕಡೆ ನೋಡಿ ಹುಬ್ಬು ಹಾರಿಸಿದಳು.